ತೆಲುಗಿನ ಪ್ರಮುಖ ಕತೆಗಾರ ಪಾಲಗುಮ್ಮಿ ಪದ್ಮರಾಜು ಅವರ 'ಗಾಲಿವಾನ' (ಚಂಡಮಾರುತ) ಕಥೆ 'ಆಂಧ್ರಪತ್ರಿಕೆ'ಯ ಭಾನುವಾರದ ಸಂಚಿಕೆಯಲ್ಲಿ (1951ರ ಮೇ 13) ಪ್ರಕಟವಾಗಿ, ಪುನಃ ಅದೇ ಪತ್ರಿಕೆಯಲ್ಲಿ 1952ರ ಮಾರ್ಚ್ 19ರಂದು ಮರು ಮುದ್ರಣಗೊಂಡಿತು. ಈ ಕಥೆಯನ್ನು ಪದ್ಮರಾಜು ಅವರೇ 'ದಿ ರೈನ್' ಹೆಸರಿನಲ್ಲಿ ಇಂಗ್ಲಿಷ್‌ಗೆ ಅನುವಾದ ಮಾಡಿದರು. ಅದೇ ವರ್ಷ 'ನ್ಯೂಯಾರ್ಕ್ ಹೆರಾಲ್ಡ್ ಟ್ರಿಬ್ಯೂನ್' ಪತ್ರಿಕೆ ಆಯೋಜಿಸಿದ ಅಂತರರಾಷ್ಟ್ರೀಯ ಕಥಾಸ್ಪರ್ಧೆಯಲ್ಲಿ ಎರಡನೆಯ ಬಹುಮಾನ ಪಡೆದು ಜಗತ್ತಿನ ಹಲವು ಭಾಷೆಗಳಿಗೆ ಅನುವಾದಗೊಂಡಿತು. ತೆಲುಗು ಕಥಾಸಾಹಿತ್ಯವನ್ನು ವಿಶ್ವಮಟ್ಟಕ್ಕೆ ಏರಿಸಿದ ಖ್ಯಾತಿ ಪಡೆದ ಪದ್ಮರಾಜು ಅವರ ಕಥೆ, ತೆಲುಗು ಕಥಾಸಾಹಿತ್ಯದಲ್ಲೂ ಧ್ರುವತಾರೆಯಂತಹದ್ದು.

ಅರ್ಥಸ್ಫುರಣೆಯಂತಲ್ಲವೆಂದು ಅವರ ಗೆಳೆಯರು ಕೆಲವರು ಗೇಲಿ ಮಾಡುತ್ತಿರುತ್ತಾರೆ. ಅದು ನಿಜವಲ್ಲವೆಂದು ಅವರು ಹೇಳಿದ್ದಿಲ್ಲ. ಆದರೆ, ಧ್ವನಿಯನುಸಾರ ಅರ್ಥ ಅನ್ವಯಿಸುತ್ತದೆಂದು ಮಾತ್ರ ಹೇಳುತ್ತಿರುತ್ತಾರೆ. ಅವರು ಮಾಡಿದ ಉಪನ್ಯಾಸಗಳಲ್ಲಿ ಬಹಳ ಸುಂದರವಾದುದು 'ಪ್ರಕೃತಿ ಪರಿಷ್ಕೃತಿ.'

ಗಾಳಿ ಜೋರಾಯಿತು. ಕಿಟಕಿ– ಬಾಗಿಲುಗಳ ಮೇಲೆ ಬಲವಾಗಿ ಬಡಿಯುತ್ತಿತ್ತು. ಇದ್ದಕ್ಕಿದ್ದಂತೆ ಬೋಗಿಯಲ್ಲಿ ಕತ್ತಲಾಯಿತು. ಇನ್ನೂ ಸಂಜೆಯೂ ಆಗಿರಲಾರದು. ರಾವು ಅವರ ಪಕ್ಕ ಕುಳಿತಿದ್ದ ಹಿರಿಯ, ಕಂಡೂ ಕಾಣದ ದೀಪದ ಬೆಳಕಿನಲ್ಲಿ ಒಂದು ಪತ್ತೆದಾರಿ ಕಾದಂಬರಿಯನ್ನು ತನ್ಮಯನಾಗಿ ಓದುತ್ತಿದ್ದ. ಅವನು ಥಟ್ಟನೆ ಮುಖವೆತ್ತಿ, ತನ್ನ ಕೈಯಲ್ಲಿ ಗಡಿಯಾರವಿದ್ದರೂ 'ಗಂಟೆ ಎಷ್ಟಾಗಿರಬಹುದು' ಎಂದು ರಾವು ಅವರನ್ನು ಕೇಳಿದ. ಅವರು ಒಂದು ಕ್ಷಣ ಆಲೋಚಿಸಿದರು. 'ಮೂರು ಗಂಟೆ ಆಗಿರಬಹುದು' ಅಂದರು.

'ಎಷ್ಟು ಕತ್ತಲಾಗಿಬಿಟ್ಟದೆ!' ಅಂದ ಹಿರಿಯ. ರಾವು ಅವರು ಉತ್ತರಿಸಲಿಲ್ಲ. ಅವನಿಗೆ ರಾವು ಅವರ ವಯಸ್ಸು ಇದ್ದೀತು. ಎಪ್ಪತ್ತರ ಮನುಷ್ಯ. ಪತ್ತೆದಾರಿ ಕಾದಂಬರಿಯೊಂದನ್ನು ಓದುತ್ತಾ ಆನಂದಿಸುವುದು ರಾವು ಅವರಿಗೆ ವಿಚಿತ್ರವಾಗಿ ಕಂಡಿತು. ಎದುರಲ್ಲಿ ಕುಳಿತಿದ್ದ ವೃದ್ಧ, ಗಂಭೀರವಾಗಿ ಚುಟ್ಟಾ ಸೇದುತ್ತಾ ಅದರ ರುಚಿಯನ್ನು ಆಸ್ವಾದಿಸುತ್ತಿದ್ದ. ಕೆಲವರು ಮನುಷ್ಯರ ಸ್ವಭಾವವೇ ಅಷ್ಟು ಅಂದುಕೊಂಡರು. ಮುಂಭಾಗಲ್ಲಿ ಕುಳಿತಿದ್ದ ಮುದುಕ, ರಾವು ಅವರಿಗಿಂತ ಹಿರಿಯನೇ ಇದ್ದಾನು. ಆದರೆ ಅವನ ಮುಖದಲ್ಲಿ ಯುವಕರಿಗೆ ಸಹಜವಾದ ಲವಲವಿಕೆ ಇತ್ತು. ಆದರೂ ಆ ಮುಖ ಆತನ ವಯಸ್ಸನ್ನು ಮರೆಮಾಡಿರಲಿಲ್ಲ. ಜೋಲುಬಿದ್ದ ದವಡೆ, ನೆರಿಗೆ ಬಿದ್ದ ಹಣೆ ವಯಸ್ಸನ್ನು ಸಾರುತ್ತಲೇ ಇದ್ದವು. ರಾವು ಅವರಿಗೆ ಉಪನ್ಯಾಸಕ್ಕೆ ಇನ್ನೊಂದು ವಿಷಯ ತೋಚಿತು. 'ವಯೋವಿಪಾಕ, ಮನೋವಿವೇಕ'.

ತಾನು ಬಹಳ ಆರೋಗ್ಯವಂತನೆಂದು ರಾವು ಅವರಿಗೆ ಹೆಮ್ಮೆ. ಅವರ ತಲೆಗೂದಲು ದಟ್ಟವಾಗಿ ಕಪ್ಪಗಿತ್ತು. ತಮ್ಮ ಮಡದಿ ತಮಗಿಂತ ದೊಡ್ಡವಳಾಗಿ ಕಾಣಿಸುತ್ತಾಳೆ. ತಿಳಿಯದವರು ತಮ್ಮ ಅಕ್ಕನೆಂದೋ, ತಾಯಿಯೆಂದೋ ಭ್ರಮಿಸುವರೆಂದು ಅವರು ಪದೇಪದೇ ತಮಾಷೆ ಮಾಡುತ್ತಿರುತ್ತಾರೆ.

ಅವರಿಗೆ ಇಪ್ಪತ್ತು ವರ್ಷದ ಮಗನೊಬ್ಬ ಇರುವನೆಂದು, ಆ ಮಗನಿಗಾಗಲೇ ಇಬ್ಬರು ಸುಂದರ ಮಕ್ಕಳಿರುವರೆಂದು, ಅವನು ಇತ್ತೀಚೆಗಷ್ಟೇ ತಂದೆಯ ವಕೀಲಿ ವೃತ್ತಿಯನ್ನು ಖುದ್ದು ನೋಡಿಕೊಳ್ಳಲು ಆರಂಭಿಸಿರುವನೆಂದು ರಾವು ಅವರನ್ನು ಕಂಡವರಾರೂ ಭಾವಿಸುವುದಿಲ್ಲ. ಅವರಷ್ಟು ಗಳಿಕೆ ಇದ್ದವರಾರೂ ಆ ವಯಸ್ಸಿನಲ್ಲಿ ವಕೀಲಿ ವೃತ್ತಿಯಿಂದ ವಿರಮಿಸಿದ್ದಿಲ್ಲ. ಅವರು ತಮ್ಮ ಜೀವನದಲ್ಲಿ ಕೆಲವು ನಿಯಮಗಳನ್ನು ಪಾಲಿಸಬೇಕೆಂದು ನಿಶ್ಚಯಿಸಿಕೊಂಡಿದ್ದರು. ಅವುಗಳನ್ನು ಅತಿಕ್ರಮಿಸದೆ ಇರಬಲ್ಲ ಸಾಹಸ ಅವರಿಗಿತ್ತು. ನೀತಿ, ನಿಯಮಗಳ ಬಗ್ಗೆ ಅವರಿಗೆ ಹುಚ್ಚು ಹಟವಿರಲಿಲ್ಲ. ಆದರೆ ಮನುಷ್ಯನ ನಡವಳಿಕೆಯನ್ನು ಸರಿಪಡಿಸಲು ಕೆಲವು ನಿಯಮಗಳು ಇರಲೇಬೇಕು ಎಂಬುದು ಅವರ ಅಭಿಪ್ರಾಯ. ಅವರು ತಿಂಗಳಿಗೊಮ್ಮೆ ಮಕ್ಕಳನ್ನು ಸಿನಿಮಾಗೆ ಕಳುಹಿಸುತ್ತಿದ್ದರು. ಅದು ಬಿಟ್ಟು ನಡುನಡುವೆ ಎಂದೂ